**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ . ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.**

| | |
|---|---|
| **ಒ ಎಸ್. ನಂ :-** | 105/2022 |
| **ಪಿ.ಡಬ್ಲ್ಯೂ** | **1** |
| **ದಿನಾಂಕ :-** | **17.02.2025** |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರಿಂದ**

ದಾವಾ ಆಸ್ತಿ ನಮ್ಮ ಪಿತ್ರಾರ್ಜಿತ ಆಸ್ತಿ. ನಾನು ಹಾಗೂ ನನ್ನ ಸಹೋದರಿಯರು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಭಾಗ ಕೇಳಿ ಓ ಎಸ್ಸ ನಂ 78/2019 ದಾವಾ ಮಾಡಿದ್ದೆವು ಎಂದರೆ ಸರಿ. ಸದರಿ ಪ್ರಕರಣ ಇನ್ನು ವಿಚಾರಣಾ ಹಂತದಲ್ಲಿ ಇದೆ ಎಂದರೆ ಸರಿ. ಆ ಪ್ರಕರಣವನ್ನು ಪ್ರತಿವಾದಿ ಹಾಗೂ ನಮ್ಮ ತಂದೆ ಕೆಂಚಪ್ಪನವರ ವಿರುದ್ದ ಮಾಡಿದ್ದೇವೆ ಎಂದರೆ ಸರಿ. ಸದರಿ ದಾವಾದಲ್ಲಿ ಈ ಪ್ರಕರಣದ ಪ್ರತಿವಾದಿ ಹಾಗೂ ನಮ್ಮ ತಂದೆ ಭಾಗ ಕೊಡುವುದಿಲ್ಲ ಎಂದು ತಕರಾರು ಮಾಡಿದ್ದಾರಾ ಎಂದರೆ ಹೌದು. ಸದರಿ ಪ್ರಕರಣದಲ್ಲಿ ನನ್ನ ಅಣ್ಣ ಹಾಗೂ ತಂದೆ ತಕರಾರು ಇನ್ನ ಸಲ್ಲಿಸಿಲ್ಲ ಎಂದರೆ ಗೊತ್ತಿಲ್ಲ. ಸದರಿ ವಿಭಾಗದ ಪ್ರಕರಣ ನಮ್ಮ ಕಡೆ ತೀರ್ಮಾನ ಆಗಿಲ್ಲ. ಮೇಲೆ ಹೇಳಿದ ವಿಭಾಗದ ಪ್ರಕರಣ ವಾಪಸ್ ಪಡೆದುಕೊಳ್ಳಬೇಕು ಎಂದು ನಮ್ಮ ತಂದೆಯನ್ನು ಕರೆದುಕೊಂಡು ಹೋಗಿ ಅವರಿಂದ ದಾನ ಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನಮ್ಮ ತಂದೆಗೆ ಪಿತ್ರಾರ್ಜಿತ ವಾಗಿ ಬಂದಿರುವುದು ಎಂದರೆ ಸರಿ. ನಮ್ಮ ತಂದೆಗೆ ದಾವಾ ಸ್ವತ್ತು ಪಿತ್ರಾರ್ಜಿತವಾಗಿ ಬಂದಿರುವ ಕಾರಣ, ಅವರು ದಾನ ಪತ್ರ ಮಾಡಿಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅತ್ತೆಯ ಮಕ್ಕಳು ನಮ್ಮ, ನನ್ನ ಅಣ್ಣ ಹಾಗೂ ತಂದೆಯ ವಿರುದ್ದ ದಾವಾ ಆಸ್ತಿ ಹಾಗೂ ಪಿತ್ರಾರ್ಜಿತ ಆಸ್ತಿಗಳ ಮೇಲೆ ವಿಭಾಗ ಕೋರಿ ಒ ಎಸ್ ನಂ 947/2019 ಎಂದು ಪ್ರಕರಣ ದಾಖಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾನ ಪತ್ರ ಮಾಡಿಸಿಕೊಂಡ ನಂತರ ಪ್ರತಿವಾದಿ ದಾನ ಪತ್ರ ರದ್ದು ಪಡಿಸಿಬೇಕು ಎಂದು ಹಾಗೂ ನನಗೆ ಭಾಗ ಬರಬೇಕು ಎಂದು ಒ ಎಸ್ ನಂ 978/2019 ದಾವಾ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ತಡೆಯಾಜ್ಞೆ ನೀಡಿದ್ದಾರೆ ಎಂದರೆ ಗೊತ್ತಿಲ್ಲ. ಈ ಎಲ್ಲಾ ವಿಚಾರಗಳನ್ನು ಪ್ರತಿವಾದಿ ತಕರಾರಿನಲ್ಲಿ ತಿಳಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಈ ಪ್ರಕರಣದಲ್ಲಿ ಹಾಕಿರುವ ತಕರಾರಿನ ಬಗ್ಗೆ ತಿಳಿದುಕೊಂಡಿದ್ದೇನೆ. ವಿಭಾಗದ ಪ್ರಕರಣಗಳು ಇನ್ನು ಇತ್ಯರ್ಥ ಆಗದೆ ನಮ್ಮ ತಂದೆಗೆ ಆರೋಗ್ಯ ಸರಿ ಇಲ್ಲದೆ ಇರುವಾಗ ಕರೆದುಕೊಂಡು ಹೋಗಿ ದಾನ ಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾನ ಪತ್ರ ಆದ ನಂತರ ಪ್ರತಿವಾದಿ ತಕರಾರು ಮಾಡಿದ್ದರು ಎಂದರೆ ಸರಿಯಲ್ಲ. ಅದರಂತೆ ನಂತರ ನಾನು ರೆವಿನ್ಯೂ ಅಧಿಕಾರಿಗಳ ಜೊತೆ ಶಾಮೀಲು ಆಗಿ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಒಟ್ಟು ಕುಟುಂಬದ ಆಸ್ತಿ ಆದ ಕಾರಣ ನಾನು ದಾವಾ ಆಸ್ತಿಯಲ್ಲಿ ಪ್ರತ್ಯೇಕ ಸ್ವಾಧೀನ ಹಾಗೂ ಪ್ರತ್ಯೇಕ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಆಸ್ತಿಯಲ್ಲಿ ಜಂಟಿ ಸ್ವಾಧೀನ ಇದ್ದ ಕಾರಣ ಅವರಿಗೆ ತೊಂದರೆ ಕೊಡಬೇಕೆಂದು ನಾನು ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಮತ್ತು ಪ್ರತಿವಾದಿ ನಡುವೆ ಆದ ವಿಭಾಗ ಪತ್ರವನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ಸದರಿ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಕೊಡಲು ತೊಂದರೆ ಇಲ್ಲ. ಸುಳ್ಳು ವ್ಯಾಜ್ಯ ಕಾರಣ ತೋರಿಸಿ ಸುಳ್ಳು ಪ್ರಕರಣ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮುಖ್ಯ ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು, ಆನೇಕಲ್.**